ಎರಡುಮನೆ ಗೌಡ್ರು ಅಂಬೋದು ಭೇಧಭಾವವೇ ಇದ್ದಿಲ್ಲ... ಅವರೆಂದೂ ಒಬ್ರಿಗೊಬ್ರು ಜಗಳ ಆಡಿರಲಿಲ್ಲ. ಈ ಸುಡುಗಾಡು ಎಲೆಕ್ಷನ್ ಬಂದು ಇಡೀ ಊರನ್ನ ಕೆಡ್ಸಿಬಿಟ್ಟೈತೆ. ಈಗ ನೋಡಿದ್ರ ಆಗಿನೆಂಗ ಇಬ್ರು ಗೌಡ್ರುಮನ್ಯಾಗ ಎತ್ತಿಲ, ಎಮ್ಮಿಲ್ಲ, ಬಾರುಕೋಲಿಲ್ಲ. ನಮ್ ಸಣ್ಣಮಂದಿ ಸೇರಿ ಇಬ್ರು ಗೌಡ್ರನ ದ್ಯಾವಮ್ಮನ ಗುಡಿತಾಕ ಕರ್ಸಿ ಕಾರಹುಣಿವಿ ಕರಿಗೆ ನಮ್ ಎತ್ತುಗಳನ ಬಿಡ್ತಿವಿ... ನಿಮ್ಮ ಒಪ್ಪಿಗೆ ಬೇಕು ಅಂತ ಮಾತಾಡಮ್ವಿ. ಹೆಂಗ ನಮ್‌ಮಂದಿ ನಮ್ ಮಾತು ಕೇಳ್ತಾರ. ಈಗೀಗ ನಮ್ ಊರಾಗ ನಮ್ ಮಂದಿನೇ ಜಾಸ್ತಿ ಆಗ್ಯಾರ... ಆಗಿನಂಗ ದಡ್ಡ ಮಂದಿಲ್ಲ. ನಮ್ ವಯಸ್ಸಿನ ಹುಡುಗರೆಲ್ಲಾ ಜಾಸ್ತಿ ಓದ್ಯಾರ. ಲೋಕ ತಿಳಕೊಂಡಾರ. ಅಲ್ಲಿಲ್ಲಿ ನಾಕೂರು ತಿರಿಗ್ಯಾಡ್ಯಾರ... ಯಪ್ಪೋ... ನೀನು ಮುಂಜಾಲೆದ್ದು, ನಿಮ್ ವಾರಿಗೆಯವ್ರಿಗೆ ಹೇಳಿ ದ್ಯಾವಮ್ಮನ ಗುಡಿತಾಕ ಕರ್ಸು. ನಾನ್ ನಮ್ ವಾರಿಗಿ ಹುಡುಗ್ರನನ ಕರ್ಕಂದು ಬರ್ತೀನಿ. ಅವಾಗ ಇಬ್ರು ಗೌಡ್ರುನ ಕರ್ಸಿ ಹಬ್ಬದ ವಿಚಾರ ಮಾತಾಡಿದ್ರ ಹೆಂಗಪಾ...' ಅಂತ ಶಾಣ ಅರೆನಿದ್ಯಾಗಿದ್ದ ದುರುಗಯ್ಯನ ಕೇಳಿದ. ದುರುಗಯ್ಯ ಚಟಪುಟ ಸೇತ್ತಿದ್ದ ಬೀಡಿನ ನೆಲಕ ಒತ್ತಿ ಒಮ್ಮಿಗೆ ಎದ್ದು ಕೂತ. 'ಇಷ್ಟು ದಿನಾದ್ರು ಈ ಸುದ್ದಿ ಹೊಳಿಲಿಲ್ಲ ನೋಡ್. ನಾಳೆನ ನಮ್‌ನಮ್ ಮಂದಿನ ಎಬ್ಬಿಸಿ ದ್ಯಾವಮ್ಮನ ಗುಡಿತಾಕ ಸಭೆಮಾಡಿ ಕೇಳನ ನಡಿ' ಎಂದ. ಅದೇ ಗುಂಗಿನ್ಯಾಗ ಎದ್ದು ಹೊರ್ಗ ಹೋದ.

ಶಾಣಗ ದುರುಗಯ್ಯ ಹೊರ್ಗ ಯಾಕ ಹೋದಂತ ಗೊತ್ತಾಗಲಿಲ್ಲ. ಈ ವರ್ಸ ಕಾರಹುಣಿವಿಗೆ ನಮ್ ಮಂದಿ ಸೇರಿ ಕರಿ ಹರದೇ ಹರ್ರಿವಿ ಎಂಬ ನಂಬಿಕಿಮ್ಯಾಲ ಏನೋ ಉಮೇದಿ ಬಂದವನಂಗ ಮಲಗಿದ. ಬಸ್ಸಮ್ಮ ತಂದೆಮಗನ ಮಾತುಗಳನ ಮಲಗಿದಲ್ಲೇ ಕೇಳಿ, ತಂದೆಮಗ ಸೇರಿ ಏನ್ ಮಾಡ್ತಿರನ್ ನಡಿ ಅಂತ ಗೊರ್‌ಗೊರ್ ನಿದ್ದಿ ಹೊಡ್ಯಾಕ ಶುರುಮಾಡಿತು.

ಬೆಳಕರದಾಗ ಶಾಣ ಎದ್ದು ನೋಡಿದ. ದುರುಗಯ್ಯ ದ್ಯಾವಮ್ಮನ ಗುಡಿಮುಂದ ಮಂದಿನ ಕೂಡಿಸಿಕೊಂಡು ಕಾರಹುಣಿವಿ ಕುರಿತೇ ಮಾತಾಡಕತ್ತಿದ್ದ. ಶಾಣ ಬಡಬಡ ಹೋಗಿ ತನ್ನ ಹಳಿಗೆಳೆಯರ್ನ ಕರಕಂದು ತಾನು ಮಂದ್ಯಾಗ ಕುಂತ. ದುರುಗಯ್ಯ ನಡ ಮಂದ್ಯಾಗ ಕುಂತಾತ 'ನೋಡ್ರಪಾ, ನಾವಿಲ್ಲಿ ಸುಮ್ನೆ ಕೂಡಾಕ ಬಂದಿಲ್ಲ, ಹಬ್ಬೇನು ಬಾಳ ದೂರಿಲ್ಲ, ಈಗ ಮಾತಾಡಕ ಇಬ್ರು ಗೌಡ್ರನ ಕರಿಸಿ, ಅವರೇನಂತಾರ ಅನ್ನೊದು ತಿಳ್ಕಂದು ಮುಂದಿನ ಕಾರ್ಯ ಮಾಡಮ್ವಿ, ಇದು ದೈವದ ಮಾತ್ಯೆತಿ... ನಾವೇ ನಿರ್ಧಾರ ತಗಂದ್ರ ಸರಿಬರಲ್ಲ... ಇದಕ್ಕೊಂದು ದೈವದಮಾತು ಬೇಕು...' ಅಂತ ದೈವದ ಮಾತಾಡಿದ. ದೈವದ ಸಭೆಗೆ ಎರಡು ಮನೆ ಗೌಡ್ರು ಬಂದು. ಅವರ ಜತಿಗೆ ಕಂತ್ರಾಟ ಮಂದಿನೂ ಬಂದ್ರು. ಇಬ್ರು ಗೌಡ್ರು ಎದುಬದುರು ದ್ಯಾವಮ್ಮನ ಕಟ್ಟೆಗೆ ನಿಗುರೊದ್ದು ಶಾಣನ ಎದ್ರಿಗೆ ಬೆಳ್ಳಗ ಕುಂತ್ರು. ದೂರ ಓದಾಕ ಹೋಗಿ ಬಂದಿದ್ದ ಶಾಣ ಬೆಳ್ಳನ ಲುಂಗಿ, ಬೆಳ್ಳನ ಅಂಗಿ ತೊಟ್ಟು ಗಡುಸಾಗಿ ಕೂತಿದ್ದು, ಗೌಡ್ರ ಕಣ್ಣುಬಿದ್ದು ಏನೂ ಮಾತಾಡದವರಂಗ ತಮ್ ಚೇಲಾಗಳಿಗೆ ಸಿಟ್ಟಿಲೆ ಅಲೆ, ತೊಲಿಲೆ ಮಾತಾಡಕ ಮುಂದಾದ್ರು. ಹಿಂಗ ಬಾಳೊತ್ತು ತಮ್ಮೊಳಗ ತಾವು ಗುಸುಗುಸು ನಡಿದಿದ್ವು.

ಹಿರೇಗೌಡ್ರು ಜತಿಗೆ ಸದಾಕಾಲ ಅಂಟಿದ್ದ ಐನೇರು ಅಂಬ್ರಯ್ಯಗ ಎಲ್ಲಾ ಒಳಸೂಟಿ ಗೊತ್ತಿತ್ತು. ಸಟಕ್ಕನ ಎದ್ದು 'ಇಲ್ಲಿಗೆ ನಮ್ಮನ್ನ ಯಾಕ ಕರ್ಸಿರಿ... ಏನ್ನತೆ... ಯಾರ್ ಮಾತಾಡೋರು, ಏನ್ ಮಾತಾಡೋದೈತೆ ಮಾತಾಡ್ರಿ. ಗೌಡ್ರು ಎಲೆಕ್ಷನ್ ಪ್ರಚಾರಕ್ಕ ಬೇರೆಕಡೆ ಊರಿಗೆ ಹೋಗಬೇಕು, ಹತ್ತಾರು ಮೀಟಿಂಗ್ ಮಾಡಬೇಕು, ಕೆಲ್ಸ ಬಾಳ ಅದ್ಯಾವ' ಅಂತ ಹೇಳಿ ಹಿರೇಗೌಡ್ರು ಬಗಲ ಕೂತ.

'ಏನಿಲ್ಲಾ ಗೌಡ್ರೆ, ಹಿಂದ್ಲಕತಿ ಹಿಂದ್ಕ ಇರ್ಲಿ, ಈಗ ನಾವೆಲ್ರೂ ಊರಾಗ ಅಣ್ಣತಮ್ರು ಇದ್ದಂಗ ಬೇಸದ್ವಿ, ಊರಿಗೆ ಛಲೋತ್ನಾಗಿ ಮಳೆಬೆಳೆನೂ ದೇವ್ರು ಸಾಕಷ್ಟು ಕೊಟ್ಟಾನ. ಹಿಂಗಾಗಿ ಊರಂಬದು ಶಾಂತಿರೀತಿಯಿಂದ ಐತೆ. ಊರು ತಣ್ಣಗ ಇರ್ಲಿಯಂಥ ಈ ವರ್ಸ ಕಾರಹುಣಿವಿ ಕರಿ ಹರಿಬೇಕಂತ ನಾವೆಲ್ಲ ಮಾತಾಡಿಕೊಂಡಿವಿ. ಊರಾಗ ಹಬ್ಬ ಹರಿದಿನಗಳನ್ನ ಮುರ್ಕಂತ ಬಂದ್ರ ಅನ್ನ ಕೊಡೋ ಭೂಮಿತಾಯಿಗೆ, ನೇಗಿಲು ಹೋರೊ ಬಸ್ವಣ್ಣನಿಗೆ ದೋಖ ಮಾಡಿದಂಗಾಗುತ್ತ. ಈ ಸಾರಿ ಕಾರಹುಣಿವಿಗೆ ಎತ್ತಗಳನ ಕರಿ ಹರಿಬೇಕಂತ ಮಾಡಿವಿ. ಇದಕ್ಕ ನಿಮ್ ಒಪ್ಪಿಗೇನೂ ಬೇಕು ಗೌಡ್ರೆ' ಅಂತ ದುರುಗಯ್ಯ ಪೀಠಿಕೆ ರೂಪದಲ್ಲಿ ಹೇಳಿಬಿದ. ಈ ಮಾತಿಗೆ ಗೌಡ್ರು ಗಪ್ಪಾದ್ರು.

ಈ ಕಾರಹುಣ್ವಿಗೆ ಎತ್ತುಗಳನ ಕರಿ ಹರಿಯೋದು ನಿಲ್ಸಿದ್ರ ನಾಳೆ ಬರೋ ಎಲೆಕ್ಷನ್‌ಗೆ ಭಾರಿ ತೊಂದ್ರೆ ಆಗುತ್ತೆ. ಅದ್ರಾಗ ಮಾದ್ರು, ಬ್ಯಾಗರ್ರು, ಬ್ಯಾಡ್ರು ಓಟೆಲ್ಲಾ ದುರುಗಯ್ಯನ ಕೈಯ್ಯಾಗ ಐದಾವ... ಈ ಎಲೆಕ್ಷನ್ ಟೈಮಿನ್ಯಾಗ ಹರ್ದುಬಿದ್ರ, ನಮ್ಗ ಪೆಟ್ಟು ಬಿಳೋದು ಗ್ಯಾರೆಂಟಿ. ಈ ಟೇಮಿನ್ಯಾಗ ಹರ್ದು ಬುಳಾಕ ಬರಲ್ಲ... ಈಗ ದುರುಗಯ್ಯನ ಮಾತು ನಡಿಸಿ ಕೊಡಲಿಲ್ಲಂದ್ರ ಸೋಲೋದು ಕಟ್ಟಿಟ್ಟ ಬುತ್ತಿ... ಅಂತ ಇಬ್ರು ಗೌಡ್ರು ಒಳ ಮನಸ್ಸಿನ ಲೆಕ್ಕಚಾರ ಒಂದೇ ಆಗಿತ್ತು. ಒಳಗೊಳಗ ಇಬ್ರು ಗೌಡ್ರು ತಿಳಕಂದು 'ಕರಿ ಹರಿರಪಾ, ಅದ್ರಗೇನೈತಿ, ಊರಿಗೆ ಒಳ್ಳೆದಾಗುತ್ತಂದ್ರ ನಮ್ದೇನಿಲ್ಲ ತಕರಾರು... ಹಬ್ಬ ನಡೀಲಿ, ಊರಿಗೆ ಒಳ್ಳೇದಾಗ್ಲಿ...' ಅಂತ ಇಬ್ರು ಗೌಡ್ರು ಒಪ್ಪಿಗಿ ಕೊಟ್ಟಂಗಾತು. ಆಗ ಎಲ್ಲಾ ಮಂದಿ ನಿಟ್ಟುಸಿರುಬಿಟ್ಟು ಕೈಬಾಯಿ ರುಚಿಸಿಕೊಂಡ್ರು.

'ಹಂಗಾರೆ ಗೌಡ್ರೆ ಒಳ್ಳೆದಾತಿ, ಪದ್ಧತಿ ಪ್ರಕಾರ ನಿಮ್ ಮನ್ಯಾಗಿನಿಂದ ಮೊದ್ಲು ಎತ್ತುಗಳ ಬರಬೇಕಲ್ಲ' ಅಂತ ದುರುಗಯ್ಯ ಹಿರೇಗೌಡಗ ತಿಳಿಸಿದ. ಹಿರೇಗೌಡಗ ಒಂದೀಟು ಶಾಖಾತು. 'ನಮ್ಮ ಮನೆತನದಾಗ ಎತ್ತುಗಳನ ತಗ್ದು ಬಾಳದಿನ ಆತು... ಮತ್ತೆಲ್ಲಿಂದ ಎತ್ತುಕಟ್ಟಿ ಕರಿ ಹರಿಲಿ... ಎಲ್ಲಾ ನಿಮ್ದು... ನೀವಾ ಹಬ್ಬ ಸಾಗಸ್ರಿ' ಅಂತ ದೊಡ್ ಮಾತಾಡಿದ. ಸಣ್ಣಗೌಡ್ರು ಮನೆತನದ ಸಂಗೇಗೌಡ ಎದ್ದುನಿಂತು, 'ನಾನೇನು ಹಬ್ಬ ಮಾಡಾಕ ಬೇಡನ್ನಲ್ಲ, ಹಿರೇಗೌಡ್ರು ಹೇಳಿದಂಗ ಆಗ್ಲಿ... ಆದ್ರ ನಂದೊಂದು ತಕರಾರು ಐತಿ. ಪ್ರತಿವರ್ಷ ಅಗಸಿಗೆ ನಿಂತ ಎತ್ತುಗಳಿಗೆ ದೊಡ್ಡಗೌಡ್ರು ಮನಿಲಿಂದ ಮೊದಲು ಕಳಸ ಬೆಳಗಸ್ತಿದ್ರಿ. ಈ ಬಾರಿ ನಮ್ಮ ಮನ್ಯಾಗಿನಿಂದ ಕಳಸ ಬೆಳಗಿಸ್ರಿ...' ಅಂತಂದ. ಈ ಮಾತನ್ನ ತಡಕಲಾರದ ಹಿರೇಗೌಡ, 'ಅದೆಂಗ ಆಗುತ್ತಪ್ಪಾ... ಬಹುಕಾಲದಿಂದ ಹಬ್ಬಹುಣಿವಿಗೆ ನಮ್ ಮನ್ಯಾಗಿನಿಂದ ಕಳಸ ಮೊದ್ಲು ಹೋಗತ್ಯೆತಿ. ಅದೆಂಗ ನಡಕಂಬಂದ ಪದ್ಧತಿ ಮುರ್ಯಾಕ ಬರ್ತೈತಿ ನೀವಾ ಹೇಳ್ರಾಪ ದೈವ...' ಅಂದಾಗ, ದುರುಗಯ್ಯನೇ ನಡುವೆ ತೂರಿ, 'ಇರ್ಲಿಬಿಡ್ರಿ ಗೌಡ್ರೆ, ಅದು ನಿನ್ನೆಮನ್ನೆ ಬಂದ ಪದ್ಧತಿ ಅಲ್ಲ. ಬಹುಕಾಲದಿಂದ ನಡ್ದ ಪದ್ಧತಿ, ದೊಡ್ಡಗೌಡ್ರು ಮನ್ಯಾಗಿನ ಕಳಸನೇ ಮೊದ್ಲು ಆಗಬೇಕು. ಈಗ ಪದ್ಧತಿ ಮುರಿದ್ರ ಊರ್ಗೆ ಒಳ್ಳೆದಾಗಲ್ಲ' ಅಂತಂದಾಗ ಉಳಿದವ್ರು ದುರುಗಯ್ಯನ ಮಾತೇ ಸರಿಯನ್ನುವಂಗ ಊಂಗುಟ್ಟಿದ್ರು. ಆಗ ಸಂಗೇಗೌಡ ದುರುಗಯ್ಯನ ಮಾತಿಗೆ ಸುಮ್ಮನಾದದ್ದಕ್ಕ ಒಂದು ಕಾರಣ ಇತ್ತು. ಈಗ ಹೇಳಿದಂಗ ನಡದ್ರ ದುರುಗಯ್ಯನ ಕಡಿಲಿಂದ ನಾಕು ಓಟು ಹೆಚ್ಚಿಗೆ ಬಿಳ್ತವಂಬೋದು ಗೊತ್ತಿತ್ತು. ಆದ್ರ ಒಳ್ಗ ಕೆಂಡ ಉರಿತಿತ್ತು. ದುರುಗಯ್ಯಗ ಇಬ್ರಾಟ ಗೊತ್ತಿದ್ದೂ ಈಗ ಇಬ್ರು ಕುಂಡಿನ ತಣ್ಣಗ ಮಾಡ ಸಲುವಾಗಿ, 'ನಾಳೆ ಒಂದಿನ ಎಲೆಕ್ಷನ್ಗೆ ಓಟಾಕಿ, ಎಲ್ರೂ ಎತ್ತುಗಳನ ತಯಾರಿ ಮಾಡಮ್ ನಡ್ರಿ...' ಎಂದು ತಮ್ ಮಂದಿನ ಹುರುಪಿಲೆ ಎಬ್ಬಿಸಲು ಶುರುಮಾಡಿಸಿದ.

ಹಗಲೆಲ್ಲ ನಾಳೆ ನಡಿಯುವ ಕಾರಹುಣ್ವೆ ಹಬ್ಬಕ ಬ್ಯಾಡ್ರು, ಕುರುಬರು, ಬ್ಯಾಗರ್ರು, ಮಾದ್ರು, ತುರುಕುರು ಹಳ್ಳದಾಗ, ಕೆರ್ಯಾಗ, ಬಾವಿ ದಂಡಿಗೆ ಎತ್ತುಗಳನ ನಿಂದ್ರಿಸಿ ಮೈತೊಳದ್ರು. ಸಂಜಿಮುಂದ ಪೋತ್ನಾಳಿಗೆ ಹೋಗಿ ಎತ್ತಿನ ಕಾಲಿಗೆ ಗೆಜ್ಜಿ, ಕೊಂಬಿಗೆ ವಾರ್ನಿಸು ಬಣ್ಣ, ಗ್ವಾಂಡೆವು, ಅಣಸು, ಹಣಿಕಟ್ಟು, ರಿಬ್ಬನ್, ಬಲೂನ್, ದಂಡಿ ಹೂ, ಟೋಪ್ ಸೆರಿಗಿನ ಸೀರೆ, ಕರಿಹಗ್ಗ ಮುಂತಾದವು ತಂದು ಮನ್ಯಾಗಿಟ್ಟು ನಾಳೆ ಹಬ್ಬದ ಖುಷ್ಯಾಗ

